


**ಎಡದಿಂದ ಬಲಕ್ಕೆ**

1. ದೇವರಿಗೆ ಸೇವಕರೆಂದು ಭಾವಿಸುವುದು ನೈಸರ್ಗಿಕ ಗುಣ 4
3. ಭಾರೀ ಮೀಸೆ ಹೊತ್ತಿರುವ ಆತನೂ ಮನುಷ್ಯನೇ ತಾನೇ? 3
4. ಒಳಗೆಲ್ಲ ಹುಳುಕು; ಹೊರಗೆ ಮಾತ್ರ ಥಳ ಥಳ ಆಡಂಬರ! 3
6. ಅವನ ವೇಷವನ್ನು ಕಂಡೇ ನೀಡಲಾದದ್ದು ಈ ಮನೆ ಕಟ್ಟುವ ಜಾಗ 4
7. ತಿಂಡಿ ಆರಿಹೋದರೇನು? ಗೌರವವಂತೂ ಇದೆಯಲ್ಲ? 3
9. ಅರಿಕೆ ಪತ್ರಗಳನ್ನು ಬರೆವ ಕ್ರಮ ತಿಳಿಸುವ ಆಧಾರ ಗ್ರಂಥ ಇದೆಯೇ? 3
11. ಯಾತನೆಯನ್ನು ನಿರ್ಮೂಲನಗೊಳಿಸಲು ಭಾರೀ ಪರಿಶ್ರಮ 3
13. ತೋಳಿನ ಮೇಲೇಕೆ ಬಂತು ಇಂಥ ಎಳ್ಳಿನಾಕಾರದ ಬೊಟ್ಟು? 3
15. ಕಂದನನ್ನು ಪಾಲಿಸುವ ವಿಚಾರದಲ್ಲಿ ಬರೀ ಮೌಢ್ಯದ ನಡವಳಿಕೆ 4
17. ಪೆಕರತನಕ್ಕೆ ಒಪ್ಪವಾಗುವಂತೆ ಆತನದು ಕೆಟ್ಟ ಆಕಾರ 3
18. ಬೆಳೆಯನ್ನೆಲ್ಲ ತುಳಿದು ಮನೆಯನ್ನೂ ಮುರಿದದ್ದು ಮದವೇರಿದ್ದ ಸಲಗ 3
19. ಜನರೇ ಸೇರಿ ಒಪ್ಪಿಸಿದ್ದು ಅರಸನ ಪತ್ನಿಗೊಂದು ಗೌರವದ ಕಾಣಿಕೆ 4

**ಮೇಲಿನಿಂದ ಕೆಳಕ್ಕೆ**

1. ಎಲ್ಲರನ್ನೂ ಸಮಾನ ಭಾವದಿಂದಲೇ ಕಾಣುತ್ತಾಳೆ ಈ ಯಜಮಾನಿ 3
2. ಕೋತಿಗಳನ್ನೆಲ್ಲ ಸೆರೆಹಿಡಿದ ಸಾಹಸದ ದೀರ್ಘ ನಿರೂಪಣೆ 3
3. ಅಂದವಾದ ಏನನ್ನೇ ಕಂಡರೂ ಭಾರೀ ಸಂತಸ 3
5. ಹರಕೆ ತೀರಿಸಲು ಬಂದವರ ಬಗ್ಗೆ ವ್ಯಂಗ್ಯ ನುಡಿ ಏಕೆ? 3
7. ಕಲಿಯಲು ಬಂದ ಎಲ್ಲರ ವಾಸಕ್ಕೆ ಈ ಭಾರೀ ಮನೆ 3
8. ಸರಸರನೆ ಮಾತನಾಡಲು ಬೇಕೇ ಬೇಕು ನಾಲಿಗೆ 3
9. ಅರಣ್ಯದ ಅತಿಕ್ರಮಣ ನಿಲ್ಲಬೇಕೆಂಬುದು ಅಣ್ಣನದೇ ಆಜ್ಞೆ 3
10. ರಂಜನೀಯವಾಗಿ ಕಥೆಗಳನ್ನೂ ಹೇಳಬಲ್ಲವನು ಆ ಅಗಸ 3
12. ಕುಡಿತದ ಚಟಕ್ಕೆ ಬಿದ್ದವನನ್ನು ಬಡಿದು ಹಾಕು 3
14. ನೆಲ ಜಲಗಳನ್ನೆಲ್ಲ ಕಾಪಾಡಲು ನಿಂತಿದ್ದಾಳೆ ಆ ಮಹಿಳೆ 3
15. ಕಂಬಿಗಳನ್ನೆಣಿಸುವ ಸ್ಥಿತಿ ನೆನೆದರೇ ಭಯದಿಂದ ನಡುಕ 3
16. ಮೇಣದ ಮೂರ್ತಿಯಂತಿದ್ದಾಳೆ ಆ ಸುಂದರ ಸ್ತ್ರೀ 3

## 07—03—2024 ಉತ್ತರಗಳು

**ಎಡದಿಂದ ಬಲಕ್ಕೆ**

1. ಸಂವರ್ಧನೆ 3. ವಿರೂಪ 4. ರಹಿತ 6. ದಾವಾನಲ 8. ಮಾರುತ್ತರ 10. ತ್ರಯೋದಶ 12. ನರೋತ್ತಮ 16. ಯವನ 17. ಗಹನ 18. ವಿನಾಯಿತಿ

**ಮೇಲಿನಿಂದ ಕೆಳಕ್ಕೆ**

1. ಸಂಪನ್ನ 2. ನೆರಳು 3. ವಿಪಿನ 5. ತಳಿರು 6. ದಾನಪತ್ರ 7. ಲವಲೇಶ 8. ಮಾಸಾಶನ 9. ರಮ್ಯಧಾಮ 11. ದಧಿಯ 13. ರೋದನ 14. ಮನವಿ 15. ಪ್ರಗತಿ

**ಪ್ರಶ್ನಾಂಕಣ**

# ಟಾರ್ಡಿಗ್ರೇಡ್: ಅದೆಂಥ ಜೀವಿ?

ಅದೊಂದು ಪರಮ ವಿಸ್ಮಯದ ಜೀವಿ (ಚಿತ್ರ1). ತೇವದಿಂದ ಕೂಡಿದ ಶಿಲೀಂಧ್ರಗಳು (ಲೈಕೆನ್ಸ್) ಅದರ ಪ್ರಧಾನ ನೆಲೆ; ಎಂಟು ಕಾಲುಗಳ ಈ ಜೀವಿಯದು ಅತಿ ಕುಬ್ಜ ಕರಡಿಯನ್ನು ಹೋಲುವ ರೂಪ. ಈ ಎರಡು ಕಾರಣಗಳಿಂದ ಅದಕ್ಕೆ ವಾಟರ್ ಬೇರ್ ಎಂಬೊಂದು ಅಭಿಧಾನ. ತನ್ನ ಎಂಟೂ ಕಾಲುಗಳನ್ನು ಬಳಸಿ ತುಂಬ ನಿಧಾನವಾಗಿ ನಡೆದಾಡುವುದು ಅದರ ಚಲನಾ ಕ್ರಮ. ಈ ಕಾರಣದಿಂದಾಗಿ ಅದಕ್ಕೆ ಟಾರ್ಡಿಗ್ರೇಡ್ (ಮಂದಗಾಮಿ) ಎಂಬ ಮತ್ತೊಂದು ಹೆಚ್ಚು ಪ್ರಚಲಿತ ಹೆಸರು.

ಸುಮಾರು 1300 ಪ್ರಭೇದಗಳಿರುವ, ಮಿಶ್ರಾಹಾರಿಗಳೂ ಆಗಿರುವ ಟಾರ್ಡಿಗ್ರೇಡ್‌ಗಳದು ಬರಿಗಣ್ಣಿಗೆ ಗೋಚರವೇ ಆಗದಷ್ಟು ಅತ್ಯಲ್ಪ ಗಾತ್ರ ಅದರ ಉದ್ದ ಕೇವಲ ಅರ್ಧ ಮಿಲಿಮೀಟರ್! ಆದರೆ ಅದರ ಜೀವನ ಸಾಮರ್ಥ್ಯಗಳು ಮಾತ್ರ ಅನನ್ಯ, ಅನೂಹ್ಯ ಮತ್ತು ಕಲ್ಪನಾತೀತ. ಅದರಂತಹ ಕಷ್ಟ ಸಹಿಷ್ಣು ಜೀವಿ ಇನ್ನಾವುದೂ ಇಲ್ಲ; ಅದರಂತಹ ಅತಿರೇಕದ ಜೀವಿಯೂ ಇನ್ನೊಂದಿಲ್ಲ. ಅದೆಲ್ಲ ಸ್ಪಷ್ಟವಾಗಲು ಟಾರ್ಡಿಗ್ರೇಡ್‌ಗಳ ಪರಮ ಸಾಮರ್ಥ್ಯಗಳ ಈ ಕೆಲ ಉದಾಹರಣೆಗಳನ್ನು ಗಮನಿಸಿ:

- ಅಚ್ಚರಿಯ ಆಕಾರದ ಮೊಟ್ಟೆಗಳಿಂದ (ಚಿತ್ರ2) ಹೊರಬರುವ ಟಾರ್ಡಿಗ್ರೇಡ್‌ಗಳಿಗೆ ಎಂಥ ಪರಿಸರದಲ್ಲೂ ಬದುಕುವ, ಎಂಥ ಪರಿಸ್ಥಿತಿಗಳಿಗೂ ಹೊಂದಿಕೊಳ್ಳುವ ಸಾಮರ್ಥ್ಯ ಇದೆ. ಟಾರ್ಡಿಗ್ರೇಡ್‌ಗಳು 0 ಡಿಗ್ರಿ ಕೆಲ್ವಿನ್ (ಎಂದರೆ ಶೂನ್ಯಕ್ಕಿಂತ 273 ಡಿಗ್ರಿ ಸೆಲ್ಸಿಯಸ್ ಕಡಿಮೆ ತಾಪ) ಶೀತವನ್ನೂ ಸಹಿಸಬಲ್ಲವು ; ಕಡಲ ತಳದ ಕುದಿ ಜಲದ ಕಂಡಿಗಳಲ್ಲೂ ಬಾಳಬಲ್ಲವು! ಆದ್ದರಿಂದಲೇ ಟಾರ್ಡಿಗ್ರೇಡ್‌ಗಳು ಕಡಲಾಳದಲ್ಲೂ ಇವೆ; ಶಾಶ್ವತ ಹಿಮದ ಎವರೆಸ್ಟ್ ಶಿಖರದಲ್ಲೂ ಇವೆ. ಧರೆಯಲ್ಲಿ ಸಮೀಪ 60 ಕೋಟಿ ವರ್ಷ ಹಿಂದಿನಿಂದಲೇ ಇರುವ ಟಾರ್ಡಿಗ್ರೇಡ್‌ಗಳು ಈವರೆಗಿನ ಐದು ಮಹಾ ಪ್ರಳಯಗಳನ್ನೂ ಎದುರಿಸಿ, ಸಹಿಸಿ ಆರಾಮವಾಗಿಯೇ ಉಳಿದಿವೆ!
- ಟಾರ್ಡಿಗ್ರೇಡ್‌ಗಳನ್ನು ಎಂಥ ಉಗ್ರ ಬರಗಾಲವಾಗಲೀ, ಎಂಥ ಭೀಕರ ಮಹಾಪೂರವೇ ಆಗಲೀ, ಎಂತಹ ದಾವಾನಲವೇ ಆಗಲೀ, ಎಂತಹ ಭಯಂಕರ ಜ್ವಾಲಾಮುಖಿ ಸ್ಫೋಟವೇ ಆಗಲಿ ಸರ್ವನಾಶ ಮಾಡುವುದು ಸಾಧ್ಯವೇ ಇಲ್ಲ. ಅಷ್ಟೇ ಅಲ್ಲ, ಕಿಂಚಿತ್ತೂ ಆಹಾರ ನೀರು ಸಿಗದಿದ್ದರೂ ಈ ಜೀವಿಗಳು 30 ವರ್ಷ ಉಳಿದಿರಬಲ್ಲವು!




- ಟಾರ್ಡಿಗ್ರೇಡ್‌ಗಳ ಅತ್ಯಂತ ವಿಸ್ಮಯದ ಸಾಮರ್ಥ್ಯ ಅವುಗಳ ಸತ್ತು ಸತ್ತು ಬದುಕಬಲ್ಲ ಜೀವನ ತಂತ್ರ! ಕ್ರಿಪ್ಟೋಬಯೋಸಿಸ್ ಎಂಬ ಈ ತಂತ್ರ ಸಂಪೂರ್ಣ ಸಿದ್ಧಿಸಿರುವ ಟಾರ್ಡಿಗ್ರೇಡ್‌ಗಳು ತೀರ ಅಭಾವದ, ಅಸಹನೀಯವಾದ ಪರಿಸ್ಥಿತಿ ಬಂದಾಗ ತಮ್ಮೊಳಗಿನ ತೇವಾಂಶವನ್ನೆಲ್ಲ ತ್ಯಜಿಸಿ, ಕಾಲುಗಳನ್ನು ಒಳಸೆಳೆದು, ಸಂಪೂರ್ಣ ಒಣಗಿಹೋದ ಒಂದು ತುಣುಕು ಸಿಪ್ಪೆಯಂತೆ, ಮೃತವೇ ಆದಂತೆ ಉಳಿಯುತ್ತವೆ (ಚಿತ್ರ3). ವಿಹಿತ ಪರಿಸ್ಥಿತಿ ಮರಳುವವರೆಗೆ ಹಾಗೆಯೇ ಇರುತ್ತವೆ. ಹೀಗೆ ಸತ್ತು ಸತ್ತು ಮತ್ತೆ ಬದುಕುವ ಸಾಮರ್ಥ್ಯದಿಂದಾಗಿ ಒಟ್ಟು ಹಲವಾರು ನೂರು ವರ್ಷ ಬದುಕಿರುತ್ತವೆ! ಎಂಥ ಜೀವಿ! ಅಲ್ಲವೇ?

**■ ಎನ್. ವಾಸುದೇವ್**